# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)

"ಗ್ರಾಮೀಣಾಭಿವೃದ್ಧಿ ಭವನ", 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 09

ಸಂ:ಕೆಆರ್‌ಐಡಿಎಲ್/ಕಾಮಗಾರಿ/ಗುಣ ನಿಯಂತ್ರಣ/2013-14 ದಿನಾಂಕ:04.03.2014.

ಗೆ,

ಜಂಟಿ / ಉಪ / ಸಹಾಯಕ ನಿರ್ದೇಶಕರು,
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್
ಡೆವಲಪ್‌ಮೆಂಟ್ ಲಿಮಿಟೆಡ್,

---

ವಿಷಯ : ನಿಗಮದವತಿಯಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳನ್ನು ಮೂರು ಹಂತಗಳಲ್ಲಿ ಗುಣಮಟ್ಟದ ತಪಾಸಣೆ ಮಾಡಿ ಉತ್ತಮ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ :
1. ಅ.ಸ.ಪತ್ರ ಸಂ:ಕೆಆರ್‌ಐಡಿಎಲ್/ಕಾಮಗಾರಿ/ಗುಣನಿಯಂತ್ರಣ/2013-14 ದಿನಾಂಕ:01.03.2014.
2. ಸಂ:ಕೆಆರ್‌ಐಡಿಎಲ್/ಕಾಮಗಾರಿ/ಗುಣನಿಯಂತ್ರಣ/2013-14 ದಿ:19.02.14.
3. ಸಂ:ಗ್ರಾಅಪ/01/ಸುಗ್ರಾಯೋ/2014(ಕೆಆರ್‌ಐಡಿಎಲ್) ದಿ:06.01.2014.
4. ಕೆಆರ್‌ಐಡಿಎಲ್ ವೆಬ್‌ಸೈಟಿನಲ್ಲಿ ಅಪ್‌ಲೋಡ್ ಮಾಡಿರುವ ಗುಣ ನಿಯಂತ್ರಣ ಬಗ್ಗೆ ಮಾಹಿತಿ.

**********

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂದಿಸಿದಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಉಲ್ಲೇಖಿತ ಪತ್ರ (4) ರಂತೆ ನಿಗಮದವತಿಯಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳನ್ನು ಮೂರು ಹಂತಗಳಲ್ಲಿ ಗುಣಮಟ್ಟದ ತಪಾಸಣೆ ಮಾಡಿ ಉತ್ತಮ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ. ಅದರಂತೆ ಕೆಆರ್‌ಐಡಿಎಲ್‌ನಲ್ಲಿ ಗುಣಮಟ್ಟದ ತಪಾಸಣೆಯ ಬಗ್ಗೆ ಮಾಹಿತಿಯನ್ನು ನೀಡಲು ಅನುಕೂಲವಾಗುವಂತೆ ನಮೂನೆಗಳನ್ನು ತಯಾರಿಸಿ, ಕೆಆರ್‌ಐಡಿಎಲ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ ದಿನಾಂಕ:28.02.2014ರ ಒಳಗೆ ತಮ್ಮೆಲ್ಲರಿಂದ feed back ಅನ್ನು ನೀಡಲು ಕೋರಲಾಗಿತ್ತಾದರೂ ವಿಭಾಗ/ಉಪವಿಭಾಗಗಳಿಂದ ಉತ್ಸಾಹಜನಕ ಸ್ಪಂದನೆ ದೊರಕಿರುವುದಿಲ್ಲ.

ಇದರ ಬಗ್ಗೆ ಉಲ್ಲೇಖ (1) ಮತ್ತು (2)ರಲ್ಲಿ ನಿಮಗೆ ಮನವರಿಕೆ ಮಾಡಿಕೊಡಲಾಗಿರುತ್ತದೆ. ಕಟ್ಟಡಗಳ ಕಾಮಗಾರಿಯ ನಮೂನೆ ಭಾಗ-1ಅನ್ನು ಪರಿಷ್ಕರಿಸಿ, ಸರಳೀಕರಿಸಿ ಮತ್ತೇ ಈ ಮೂಲಕ ಕೆಆರ್‌ಐಡಿಎಲ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ.

ನಿಗಮದವತಿಯಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದೊಂದಿಗೆ ನಿರ್ವಹಿಸಿ, ಸದರಿ ಕಟ್ಟಡಗಳ ಕಾಮಗಾರಿಯ ನಮೂನೆ ಭಾಗ-1 ಅನ್ನು ತಮ್ಮ ಮಾಸಿಕ ಲೆಕ್ಕಪತ್ರಗಳೊಂದಿಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

4/3

ಪ್ರಧಾನ ವ್ಯವಸ್ಥಾಪಕರು (ಉತ್ತರ)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್
ಲಿಮಿಟೆಡ್, ಬೆಂಗಳೂರು.